# ನಾಲಿಗೆಯ ಹೈಜಾಕರ್!

ವಿಮಾನವನ್ನು ಹೈಜಾಕ್ ಮಾಡುವುದನ್ನು ಕೇಳಿದ್ದೀರಿ; ಆದರೆ ನಾಲಿಗೆಯನ್ನೇ ಹೈಜಾಕ್ ಮಾಡುವ ಬಗ್ಗೆ ಕೇಳಿದ್ದೀರಾ? ಹೌದು ಮಿರಾಕಲ್ ಫ್ರೂಟ್ ಅಥವಾ ಮಿರಾಕಲ್ ಬೆರ್ರಿ ಎಂದು ಕರೆಯುವ ಈ ಹಣ್ಣನ್ನು ತಿಂದರೆ ಸುಮಾರು ಅರ್ಧ ಗಂಟೆಗಳ ಕಾಲ ನಾವು ಹುಳಿರುಚಿಯ ಏನನ್ನೇ ತಿಂದರೂ ಅದು ಸಿಹಿಯಾಗಿ ರುಚಿಸುತ್ತದೆ. ನೀವು ಇದನ್ನು ತಿಂದ ನಂತರ ನಿಂಬೆಹಣ್ಣನ್ನು ಕೂಡ ತಿಂದು ಮುಗಿಸಬಹುದು.ಇದರ ಸಸ್ಯಶಾಸ್ತ್ರೀಯ ಹೆಸರು **synsepalum dulcificum** ಇದರ ಮೂಲ ಪೂರ್ವ ಆಫ್ರಿಕಾ. ಅಲ್ಲಿ ಈ ಹಣ್ಣನ್ನು ಮದ್ಯವನ್ನು ಸಿಹಿಯಾಗಿಸಲು ಬಳಸುತ್ತಾರೆ.

–ವನ್ಯ, ಸಾಯಿಮನೆ, ಉತ್ತರ ಕನ್ನಡ





# ರಥದ ಹಾರ

ಹುಬ್ಬಳ್ಳಿಯ ನವನಗರದಲ್ಲಿರುವ ಸಿದ್ದಪ್ಪಜ್ಜನ ಗುಡಿಯ ನೂತನ ಕಾಷ್ಠ ರಥವನ್ನು ಅಲಂಕರಿಸಲು ಹಾಕಿದ್ದ ವಿವಿಧ ಬಗೆಯ ಹಾರಗಳಲ್ಲಿ ಗಮನ ಸೆಳೆದದ್ದು ಶೇಂಗಾದಿಂದ ಪೋಣಿಸಿದ 17 ಅಡಿ ಗಾತ್ರವಿದ್ದ ಹಾರ ಮತ್ತು ರುದ್ರಾಕ್ಷಿ ಮಣಿಗಳಿಂದ ತಯಾರಿಸಿದ ಹತ್ತು ಅಡಿಗಳಷ್ಟು ದೊಡ್ಡ ಹಾರಗಳು. ಇದನ್ನು ತಯಾರಿಸಿದ ಕಲಾವಿದರ ಕೌಶಲ ನಿಜಕ್ಕೂ ಹೊಗಳುವಂತೆ ಇತ್ತು.

–ಪ. ರಾಮಕೃಷ್ಣ ಶಾಸ್ತ್ರಿ

# ಐಸ್‌ಕ್ರೀಮ್ ವಾಹನದಲ್ಲಿ ತರಕಾರಿ!

ಕೋವಿಡ್19ರ ಲಾಕ್‌ಡೌನ್‌ನಿಂದ ಅಗತ್ಯ ವಸ್ತು ಮಾರಾಟ ಮಾಡಲು ದುಖಾನುಗಳಿಗೆ ಬೆಳಿಗ್ಗೆ ಮಾತ್ರ ಅವಕಾಶ. ಮನೆಗೆ ಬೇಕಿದ್ದವುಗಳನ್ನು ತರಲು ಬಜಾರ್‌ಗೆ ತೆರಳಿದಾಗ ಮಿತ್ರ ಪ್ರಶಾಂತನ ಕೂಗಿಗೆ ಓಗೊಟ್ಟು ನೋಡಿದಾಗ ತನ್ನ ಸಂಗೀತಾ ಐಸ್‌ಕ್ರೀಮ್‌ನ ವಾಹನದಲ್ಲಿ ಐಸ್‌ಕ್ರೀಮ್ ಸಂಗ್ರಹದ ಡಬ್ಬಗಳು ಮಾಯವಾಗಿ; ಸದ್ಯಕ್ಕೆ ಅದರ ಜಾಗದಲ್ಲಿ ಹಣ್ಣುಗಳು ತುಂಬಿದ ಕ್ರೇಟ್‌ಗಳು ರಾರಾಜಿಸುತ್ತಿದ್ದವು! ಬೆಳಿಗ್ಗೆ ಐಸ್‌ಕ್ರೀಮ್, ಕ್ಯಾಂಡಿ ತುಂಬಿದ ವಾಹನ ಹಳ್ಳಿಗಳಿಗೆ ಹೊರಟರೆ ಸಂಜೆಯವರೆಗೂ ವ್ಯಾಪಾರ ಮುಗಿಸಿ (ಜಾತ್ರೆ, ಸಂತೆ, ಕ್ರಿಕೆಟ್‌ಗಳಲ್ಲೂ) ಬರುವುದು ವಾಡಿಕೆ. ಆದರೆ ಈಗ ಏನಿದ್ದರೂ ಮಧ್ಯಾಹ್ನ ಎರಡು ಗಂಟೆ ಒಳಗೆ ಮನೆ ಸೇರಬೇಕಿರುವುದರಿಂದ ಈ ಹೊಂದಾಣಿಕೆಯಿಂದ ಹಣ್ಣಿನ ವ್ಯಾಪಾರ ಶುರು ಮಾಡಿದ್ದಾನೆ. ಹಣ್ಣುಗಳಂತೂ ಕೆಲ ದಿನ ಉಳಿಯುತ್ತೆ. ಏನೆಂದರೂ ನಾವು ಕಾಲಕ್ಕೆ ತಕ್ಕಂತೆ ನಡೆಯಲೇ ಬೇಕು ಹೊಟ್ಟೆಪಾಡಿಗಾಗಿ ಅನ್ನುತ್ತಾನೆ ಮಿತ್ರ.

–ನಗರ ಗುರುದೇವ್ ಭಂಡಾರ್ಕರ್, ಹೊಸನಗರ

